# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 605 (677) |
| ಉತ್ತರಿಸುವ ದಿನಾಂಕ | 12-07-2023 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ಕಂದಾಯ ಇಲಾಖೆಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಅಡಿಯಲ್ಲಿರುವ ಎಲ್ಲಾ ಉಪನೋಂದಣಿ ಕಛೇರಿಗಳಲ್ಲಿ ಪರಿಷ್ಕೃತ ಕಾವೇರಿ-2.0 ತಂತ್ರಾಂಶವನ್ನು ಜಾರಿಗೆ ತರಲಾಗಿದೆಯೇ; ಹಾಗಿದ್ದಲ್ಲಿ, ಈ ಯೋಜನೆ ಅಡಿಯಲ್ಲಿ ನಾಗರೀಕರಿಗೆ ದೊರೆಯುವ ಸೇವೆಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಹೌದು.<br><br>ರಾಜ್ಯದ ಎಲ್ಲಾ 256 ಉಪನೋಂದಣಿ ಕಛೇರಿಗಳಲ್ಲಿ ಕಾವೇರಿ-2.0 ತಂತ್ರಾಂಶವನ್ನು ಅಳವಡಿಸಲಾಗಿರುತ್ತದೆ. ಈ ತಂತ್ರಾಂಶದಲ್ಲಿ ನಾಗರೀಕರಿಗೆ ಪ್ರಸ್ತುತ ಈ ಕೆಳಕಂಡ ಸೇವೆಗಳನ್ನು ಒದಗಿಸಲಾಗುತ್ತಿದೆ.<br>1) ದಸ್ತಾವೇಜುಗಳ ನೋಂದಣಿ<br>2) ಋಣಭಾರ ಪ್ರಮಾಣ ಪತ್ರ<br>3) ದಸ್ತಾವೇಜುಗಳ ದೃಢೀಕೃತ ನಕಲು<br>4) ಅಮಾನತ್ತಿನಲ್ಲಿಡಲಾದ ದಸ್ತಾವೇಜುಗಳ ಬಿಡುಗಡೆ |
| ಆ | ಕಾವೇರಿ-2.0 ಹೊಸ ತಂತ್ರಾಂಶವನ್ನು ಸಿದ್ಧಪಡಿಸಿದ ಸಂಸ್ಥೆ ಯಾವುದು ಮತ್ತು ಬಳಕೆಯಾಗುತ್ತಿರುವ ತಂತ್ರಾಂಶಗಳು ಯಾವುವು; (ಪೂರ್ಣ ವಿವರ ನೀಡುವುದು) | ಕಾವೇರಿ-2.0 ತಂತ್ರಾಂಶವನ್ನು ಇ-ಆಡಳಿತ ಇಲಾಖೆಯ ಅಧೀನದಲ್ಲಿ ಬರುವ ಸೆಂಟರ್ ಫಾರ್ ಸ್ಮಾರ್ಟ್ ಗೌರನೆನ್ಸ್ ಸಂಸ್ಥೆಯು ಅಭಿವೃದ್ಧಿಪಡಿಸಿರುತ್ತದೆ.<br><br>ಈ ತಂತ್ರಾಂಶದ ಅಭಿವೃದ್ಧಿಯಲ್ಲಿ .net core 6.0 ಹಾಗೂ Angular 15 ಸಾಫ್ಟ್‌ವೇರ್ ತಂತ್ರಾಂಶಗಳನ್ನು ಬಳಕೆ ಮಾಡಲಾಗಿರುತ್ತದೆ. |
| ಇ | ಕಾವೇರಿ-2.0 ಹೊಸ ತಂತ್ರಾಂಶವನ್ನು ರೋಲ್‌ಔಟ್ ಮಾಡುವ ಮುನ್ನ ಉಪನೋಂದಣಿ ಕಛೇರಿಗಳಲ್ಲಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ; (ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು) | ಹೌದು.<br><br>ಕಾವೇರಿ-2.0 ತಂತ್ರಾಂಶದ ಅಳವಡಿಕೆಯ ಜೊತೆಯಲ್ಲಿ ಉಪನೋಂದಣಿ ಕಛೇರಿಗಳಲ್ಲಿ ಈ ಹಿಂದೆ ಇದ್ದ ಹಳೆಯ ಹಾರ್ಡ್‌ವೇರ್ ಗಳನ್ನು ಬದಲಾಯಿಸಿ, ಹೊಸ ಕಂಪ್ಯೂಟರ್ ಹಾರ್ಡ್‌ವೇರ್‌ಗಳನ್ನು ಒದಗಿಸಲಾಗಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಈ | ಕಾವೇರಿ-2.0 ಹೊಸ ತಂತ್ರಾಂಶದ ನೋಂದಣಾಧಿಕಾರಿಗಳ ಕಛೇರಿ ಲಾಗಿನ್ ತೊಂದರೆ, ನೋಂದಣಿ ವಿಳಂಬ, ನೆಟ್ ಬ್ಯಾಂಕಿಂಗ್‌ನಲ್ಲಿ ಹಣ ವರ್ಗಾವಣೆ ತೊಂದರೆ ಮತ್ತು ಅಪ್‌ಲೋಡ್ ಆಗದ ಸಮಸ್ಯೆ ಮುಂತಾದ ದೋಷಗಳನ್ನು ನಾಗರೀಕರು ಹಾಗೂ ನೋಂದಾಯಿತರು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕಾವೇರಿ-2.0 ತಂತ್ರಾಂಶದಲ್ಲಿ ಲಾಗಿನ್‌ಗೆ ಸಂಬಂಧಿಸಿದ ಸಮಸ್ಯೆಗಳಾದ ನೋಂದಣಿ ವಿಳಂಬ ಹಾಗೂ ಅಪ್‌ಲೋಡ್ ಆಗದ ಸಮಸ್ಯೆಗಳು ಬಂದಿರುವುದಿಲ್ಲ.<br>ಆನ್‌ಲೈನ್ ಮೂಲಕ ಶುಲ್ಕ ಪಾವತಿಗೆ ಸಂಬಂಧಿಸಿದಂತೆ ಕೆಲವೊಮ್ಮೆ ಸಮಸ್ಯೆ ಉಂಟಾಗಿದ್ದು, ಅದನ್ನು ಕೂಡಲೇ ಪರಿಹರಿಸಲಾಗಿರುತ್ತದೆ. |
| ಉ | ಹಾಗಿದ್ದಲ್ಲಿ, ಈ ದೋಷಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು: (ಪೂರ್ಣ ವಿವರ ನೀಡುವುದು) | ಕಾವೇರಿ-2.0 ತಂತ್ರಾಂಶದಲ್ಲಿ ಸಾರ್ವಜನಿಕರು ದಸ್ತಾವೇಜು ನೋಂದಣಿಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಎದುರಿಸುವ ಗೊಂದಲ / ಸಮಸ್ಯೆಗಳಿಗೆ ತ್ವರಿತವಾಗಿ ಪರಿಹಾರ ಒದಗಿಸುವ ಸಂಬಂಧ ಇಲಾಖೆಯು ಸಕಾಲ ಕರೆ ಕೇಂದ್ರದ ಮುಖಾಂತರ ಸಹಾಯವಾಣಿಯನ್ನು (080-68265316) ಪ್ರಾರಂಭಿಸಿರುತ್ತದೆ ಹಾಗೂ ಅವುಗಳನ್ನು ವ್ಯವಸ್ಥಿತವಾಗಿ ಪರಿಹರಿಸಲಾಗುತ್ತಿದೆ. |

ಕಂಇ/124/ಎಂಎನ್‌ಎಸ್‌ಎ/2023

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು